ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.519/2021

| | | | |
|---|---|---|---|
| ಹೆಸರು | : | ಜ್ಞಾನಮೂರ್ತಿ | ಸಿ .ಡಬ್ಲ್ಯೂ : 8 |
| ತಂದೆ ಹೆಸರು | : | ನಾಗರಾಜು | ಪಿ .ಡಬ್ಲ್ಯೂ :6 |
| ವಯಸ್ಸು | : | 44 ವರ್ಷ | |
| ಉದ್ಯೋಗ | : | PI , ಹೈಕೋರ್ಟ್ ಜಾಗೃತ ದಳ | |
| ವಾಸಸ್ಥಳ | : | ಬೆಂಗಳೂರು | |

ಸಾಕ್ಷಿಯನ್ನು ದಿಃ16-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

|ಫೆಬ್ರುವರಿ 2020 ರಿಂದ ಸೆಪ್ಟೆಂಬರ್ 2021 ರವರೆಗೆ ಗುಬ್ಬಿ ಠಾಣೆಯಲ್ಲಿ PSI ಆಗಿ ಸೇವೆ ಸಲ್ಲಿಸಿದ್ದೇನೆ.

ದಿಃ 09-05-2021 ರಂದು ಚಾಸಾ -7 ರವರಿಂದ ಕಡತವನ್ನು ಪಡೆದು ಇತನಿಖೆಯನ್ನು ಮುಂದುವರೆಸಿದ್ದೇನೆ . ಅದೇ ದಿನ ಚಾಸಾ -6 ರವರಿಂದ ಚಾಸಾ -1 ರವರ ಗಾಯದ ಪ್ರಮಾಣ ಪತ್ರ ಪಡೆದಿದ್ದೇನೆ .

ದಿಃ 31-05-2021 ರಂದು 1 ಮತ್ತು 2 ನೇ ಆರೋಪಿತರುಗಳು ಠಾಣೆಗೆ ಹಾಜರಾಗಿದ್ದು ಅವರ ವಿರುದ್ದ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಮೀನಿನ ಮೂಲಕ ಬಿಡುಗಡೆ ಮಾಡಿರುತ್ತೇನೆ .

ನಂತರ ತನಿಖೆ ಪೂರ್ಣಗೊಂಡಿದ್ದು ಅದೇ ದಿನ ಆರೋಪಿತರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ IPC ಕಲಂ 504 , 506, 323, 324 ಸಹವಾಚಕ 34 ರಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ .

ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ .

ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರುಗಳನ್ನು ನೋಡಿ ಗುರುತಿಸಿದ್ದಾರೆ .

ಸಾಕ್ಷಿಗೆ ಚಾಸಾ -1 ರವರ ಗಾಯದ ಪ್ರಮಾಣ ಪತ್ರ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -4 ಎಂದು ಸಾಕ್ಷಿ ಸಹಿಯನ್ನು ನಿಪಿ -4 (ಎ) ಎಂದು ಗುರುತಿಸಲಾಯಿತು.

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ಪ್ರಕರಣಕ್ಕಾಗಿ ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ .

ಫಿರ್ಯಾದುದಾರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿತರು ಯಾವುದೇ ತಪ್ಪು

ಮಾಡದೇ ಇದ್ದರೂ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ಠಾಣಾ ಅಂಕಿ ಅಂಶಗಳ ಹೆಚ್ಚುವರಿಗಾಗಿ ಆರೋಪಿತರ ವಿರುದ್ಧ ಸುಳ್ಳು ವಿವರಗಳ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

Sd/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.